**<u>ಸಾಕ್ಷಿಯನ್ನು ಇಂದು ದಿನಾಂಕ 03.12.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

ಮುಂದುವರೆದ **ಪಾಟೀ ಸವಾಲುಃ ಶ್ರೀ ಎನ್. ಆರ್. ಪ್ರತಿವಾದಿ ಪರ ವಕೀಲರಿಂದ**

ದಾವಾ ಸ್ವತ್ತಿನ ಅಳತೆ ಎಷ್ಟಿದೆ ಎಂದರೆ ಗಲ್ಲಿಯ ಜಾಗ 8 ಪೂಟ್ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಮನೆಗೆ ಹಾಗೂ ಶೇಖ ಅಲೀ ರವರ ಅಣ್ಣನ ಮನೆ ಅಕ್ಕ-ಪಕ್ಕದಲ್ಲಿ ಇರುವುದಿಲ್ಲ. ಶೇಖ ಅಲೀ ರವರ ಅಣ್ಣನ ಮನೆಯ ಎದುರುಗಡೆ 2 ಅಡಿ ಅಳತೆಯ ಗಲ್ಲಿ ಇರುತ್ತದೆ. ಸದರಿ ಗಲ್ಲಿ ಹಂಗೆ ಮುಂದುವರೆಯುತ್ತದೆ ಎಂದರೆ ಸರಿ. ಪ್ರತಿವಾದಿರವರು ಮನೆಯ ಪಶ್ಚಿಮ ದಿಕ್ಕಿಗೆ 2 ಪೂಟ ನಾಲಿ ತದನಂತರ 2 ಪೂಟ ಅಳತೆಯ ಗಲ್ಲಿ ಇರುತ್ತದೆ. ಪ್ರತಿವಾದಿರವರ ಮನೆಯ ಪಶ್ಚಿಮಕ್ಕೆ 4 ಅಡಿ ಗಲ್ಲಿ ಇರುತ್ತದೆ ಎಂದರೆ ಸಾಕ್ಷಿಯ 2 ಅಡಿ ನಾಲೀ ಹಾಗೂ 2 ಅಡಿ ಗಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಅದೇ ರೀತಿ ಪ್ರತಿವಾದಿಯ ಅಣ್ಣನ ಮನೆಯ ದಕ್ಷಿಣ ದಿಕ್ಕಿಗೆ 4 ಅಡಿ ಗಲ್ಲಿ ಇರುತ್ತದೆ ಎಂದರೆ 2 ಅಡಿ ಗಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಯವರ ಮನೆ ಹಾಗೂ ಆತನ ಅಣ್ಣನ ಮನೆ ಮೂಲೆಯಲ್ಲಿ ಇರುವುದರಿಂದ ಸದರಿ ಮನೆಯು ಸರಿಪಡಿಸಲು ಖುಲ್ಲಾ ಜಾಗ ಬಿಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರವರ ಅಣ್ಣನ ಮನೆಯ ಮುಂದುಗಡೆ ಹಾಗೂ ನನ್ನ ಮನೆಯ ನಡುವೆ 9 ಪೂಟ 6 ಇಂಚ್ ಖುಲ್ಲಾ ಜಾಗ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿರವರ ಮನೆಯ ಪಶ್ಚಿಮ ದಿಕ್ಕಿಗೆ 0 ಜಾಗ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯರವರ ಅಣ್ಣನ ಮನೆಯಿಂದ ಪ್ರತಿವಾದಿರವರ ಮನೆಯವರೆಗೂ 9 ಪೂಟ ಜಾಗ ಪ್ರತಿವಾದಿರವರು ಖುಲ್ಲಾ ಬಿಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿರವರು ತನ್ನ ಮನೆಯ ಮೇಲೆ ಚತ್ತ ಹಾಕಿ ಬಹಳ ವರ್ಷ ಆಗಿರುತ್ತದೆ. ಸದರಿ ಮೇಲ್ಮಹಡಿಯ ಮೇಲೆ ಸುಮಾರು ವರ್ಷಗಳು ಆಗಿರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಪ್ರತಿವಾದಿರವರು 3 ಪೂಟ ಅತಿಕ್ರಮಣ ಮಾಡಿ ಕಟ್ಟಿರುವುದಾಗಿ ಪುರಸಭೆಯಲ್ಲಿ ಪಿರ್ಯಾಧಿ ನೀಡಿರುವುದಾಗಿ ನುಡಿಯುತ್ತಾರೆ. ಪ್ರತಿವಾದಿರವರು ನೆಲಮಹಡಿಯಲ್ಲಿರುವ ಗೋಡೆ 50 ವರ್ಷ ಮೇಲ್ಪಟ್ಟಾಗಿದೆ ಎಂದರೆ ಸರಿ. ಸದರಿ ಗೋಡೆಯ ಮೇಲೆ ಪ್ರತಿವಾದಿರವರು 8 ವರ್ಷಗಳ ಹಿಂದೆ ಹೊಸ ಚತ್ತ ಹಾಕಿರುತ್ತಾರೆ ಎಂದರೆ ಸರಿ. 50 ವರ್ಷಗಳ ಹಿಂದೆ ಪ್ರತಿವಾದಿರವರು ಗೋಡೆಯನ್ನು ಕಟ್ಟುವಾಗ ನಾನು ಯಾವುದೇ ರೀತಿಯ ತಕರಾರು ಮಾಡಿಲ್ಲ. ನಾನು ಈಗ ಪ್ರತಿವಾದಿರವರು ಹೊಸ ಚತ್ತ ಹಾಕುತ್ತಿರುವಾಗ ತಕರಾರು ಮಾಡಿರುತ್ತೇನೆ. ನಾನು 9 ವರ್ಷಗಳ ಹಿಂದೆ ಸಲ್ಲಿಸಿರುವ ತಕರಾರು ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ತಕರಾರು ಸಲ್ಲಿಸಿದ ನಂತರ ನಾನು ಯಾವುದೇ ದಾವೆಯನ್ನು ಸಲ್ಲಿಸಿಲ್ಲ. ಪ್ರತಿವಾದಿರವರು ಅತಿಕ್ರಮಣ ಮಾಡಿ ಚತ್ತನ್ನು ಹಾಕಿರುತ್ತಾರೆ, ಆದರೆ ಗೋಡೆಯ ಯಾವುದೇ ರೀತಿಯ ತಕರಾರು ಇರುವುದಿಲ್ಲ. ನನ್ನ ದಾವೆಯಲ್ಲಿ ಪ್ರತಿವಾದಿರವರು ಅತಿಕ್ರಮಣ ಮಾಡಿ ಮನೆಯನ್ನು ಕಟ್ಟಿರುತ್ತಾರೆ ಎಂಬುವುದಾಗಿ ಬರೆಸಿಲ್ಲ. ದಾವಾ ತಯಾರಿಸಲು ವಕೀಲರಿಗೆ ಮಾಹಿತಿ ನಾನೇ ನೀಡಿರುತ್ತೇನೆ. ನಾನು ನನ್ನ ದಾವೆಯಲ್ಲಿ ತಕರಾರು ಸಲ್ಲಿಸಿದ ಬಗ್ಗೆ ಬರೆದಿರುತ್ತೇನೆ, ಆದರೆ ಯಾವ ದಿನಾಂಕದಂದು ತಕರಾರು ಸಲ್ಲಿಸಿರುತ್ತೇನೆ ಎಂದು ಬರೆದಿಲ್ಲ. ನಾನು ನನ್ನ ದಾವೆಯಲ್ಲಿ ಪುರಸಭೆನವರು ಯಾವುದೇ ಕ್ರಮವನ್ನು ಕೈಗೊಂಡಿಲ್ಲ ಎಂದು ದಾವೆಯಲ್ಲಿ ಬರೆಸಿಲ್ಲ. ನನ್ನ ದಾವೆಯಲ್ಲಿ ಶೌಚಾಲಯ ನನ್ನ ಮನೆಯ ಬಾಗಿಲು ಎದುರುಗಡೆ ಕಟ್ಟಿರುವ ಬಗ್ಗೆ ಹೇಳಿರುತ್ತೇನೆ. ನನ್ನ ದಾವೆಯಲ್ಲಿ ನನ್ನ ಮನೆಯ ಮುಂದಿರುವ 3 ಅಡಿ ಗಲ್ಲಿಯನ್ನು ಅತಿಕ್ರಮಣ ಮಾಡಿ ಪ್ರತಿವಾದಿರವರು ಶೌಚಾಲಯವನ್ನು ಕಟ್ಟುತ್ತಿದ್ದಾರೆ ಎಂದು ಬರೆಸಿರುತ್ತೇನೆ. ನನಗೆ ಪ್ರತಿವಾದಿರವರು 3 ಪೂಟ ಗಲ್ಲಿಯಲ್ಲಿ ಕಟ್ಟುತ್ತಿರುವ ಬಗ್ಗೆ ತಕರಾರು ಇರುತ್ತದೆ. ಸದರಿ ಶೌಚಾಲಯ ಪ್ರತಿವಾದಿರವರು 1ನೇ ಮಹಡಿಯಲ್ಲಿ ಕಟ್ಟುತ್ತಿದ್ದಾರೆ ಎಂದರೆ ಸರಿ. ಈ ವಿಷಯ ನಾನು ನನ್ನ ದಾವೆಯಲ್ಲಿ ಬರೆಸಿಲ್ಲ ಎಂದರೆ ಸಾಕ್ಷಿಯು ಆಗ ಮೊದಲನೇ ಮಹಡಿ ಇರಲಿಲ್ಲ ಆದ್ದರಿಂದ ಬರೆಸಿಲ್ಲ ಎಂದು ನುಡಿಯುತ್ತಾರೆ. ಇಕ್ಬಾಲಖಾನ ನನ್ನ ಸ್ನೇಹಿತ ಎಂದರೆ ಸರಿಯಲ್ಲ. ಸದರಿ ಇಕ್ಬಾಲಖಾನ ಇತನು 2-3ಬಾರಿ ಪುರಸಭೆಯ ಅಧ್ಯಕ್ಷನಾಗಿದ್ದನು ಎಂದರೆ ಸಾಕ್ಷಿಯು ಮೊದಲು ಇದ್ದರು, ಈಗ ಇರುವುದಿಲ್ಲ ಎಂದು ನುಡಿಯುತ್ತಾರೆ.

ಸದರಿ ಇಕ್ಬಾಲಖಾನರವರ ಸಹಾಯದಿಂದ ಪ್ರತಿವಾದಿರವರ ವಿರುದ್ದ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ದಾವೆ ಸುಳ್ಳು ಮಾಹಿತಿಯ ಮೇರೆಗೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಸಾರ್ವಜನಿಕ ರಸ್ತೆಯ ಮೇಲೆ ಪ್ರತಿವಾದಿರವರು ಶೌಚಾಲಯ ಕಟ್ಟುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಗಲ್ಲಿ ನನಗೆ ಸೇರಿದ್ದು ಇರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿರವರು ಆತನ ಅಣ್ಣನ ಮನೆಯ ಜಾಗದಲ್ಲಿ ಶೌಚಾಲಯ ಕಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ. ಶೌಚಾಲಯದ ಬಾಗಿಲು ಯಾವ ದಿಕ್ಕಿಗೆ ಇರುತ್ತದೆ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ಪುರಸಭೆಯವರು ನೀಡಿದ ಮಂಜೂರಾತಿಗೆ ನಾನು ಪ್ರಶ್ನಿಸಿಲ್ಲ ಎಂದರೆ ಸಾಕ್ಷಿಯ ಪ್ರತಿವಾದಿರವರು ಪರವಾನಿಗೆ ಪಡೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಪುರಸಭೆಯವರು ಮೊದಲು ಮಂಜೂರಾತಿ ನೀಡಿದ್ದರು ಆದರೆ ನಮ್ಮ ಪ್ರಭಾವದಿಂದ ಸದರಿ ಮಂಜೂರಾತಿಯನ್ನು ರಿನಿವಲ್ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ಸದರಿ ರಿನಿವಲ್ ಸಲುವಾಗಿ ಅರ್ಜಿ ಕೊಟ್ಟ 2 ತಿಂಗಳ ನಂತರ ಪ್ರತಿವಾದಿರವರು ಶೌಚಾಲಯ ಕಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿರವರು ಮೊದಲನೇ ಮಹಡಿ ಕಟ್ಟುತ್ತಿರುವಾಗ ಸಾಕ್ಷಿಯು ಮೊದಲನಿಲೇ ತಕರಾರು ನೀಡುತ್ತಿದ್ದೇನೆ ಎಂದು ನುಡಿಯುತ್ತಾರೆ. ಪ್ರತಿವಾದಿರವರು ಮನೆಯ ಮುಂದೆ ಒಂದು ಸೆಪ್ಟಿಕ ಟ್ಯಾಂಕ ಇರುತ್ತದೆ ಎಂದರೆ ಸರಿಯಲ್ಲ. ಮೊದಲಿನಿಂದಲೇ ಅಲ್ಲಿ ಪೈಪ ಇರುತ್ತದೆ ಎಂದರೆ ಸರಿಯಲ್ಲ. ಈಗಲೂ ಸಹ ಪೈಪ ಹಾಕಿರುತ್ತದೆ ಅಷ್ಟಕ್ಕೆ ಸೀಮಿತವಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿರವರು ಹಳೆಯ ಗೋಡೆಯ ಮೇಲೆ ಚತ್ತನ್ನು ಹಾಕಿರುತ್ತಾರೆ ಎಂದರೆ ಸರಿ. ಪ್ರತಿವಾದಿರವರ ಮನೆ ಹಿಂದುಗಡೆ ಭೂಮಿಯ ಎತ್ತರ ಇರುತ್ತದೆ ಹಾಗೂ ಮುಂದಿನ ಭಾಗಕೆಳಗಡೆ ಇರುತ್ತದೆ ಎಂದರೆ ಸರಿ . ಜಮೀನಿದಿಂದ ಪ್ರತಿವಾದಿರವರ ಮನೆಯ ನೆಲಮಹಡಿಯಿಂದ 6 ಪೂಟ ಎತ್ತರದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 4 ಪೂಟ ಎತ್ತರ ಇರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿರವರ ಮುಂಭಾಗದಲ್ಲಿರುವ ನೆಲಮಹಡಿಯ ಚತ್ತ ನನ್ನ ತಲೆಗೆ ಹತುತ್ತದೆ ಎಂದರೆ ಸರಿ. ನನ್ನ ಎತ್ತರ 5 ಪೂಟ ಇರುತ್ತದೆ ಎಂದರೆ ಸರಿ. ಪ್ರತಿವಾದಿರವರು ಮನೆಯನ್ನು ಕಟ್ಟಲು ಪುರಸಭೆಯಿಂದ ರಂದು ದಿನಾಂಕ 11.05.2021ರಂದು ಪರವಾನಿಗೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಪ್ರತಿವಾದಿರವರು ಎಲ್ಲಾ ಕಟ್ಟಡ ಪೂರ್ಣಗೊಳಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ತಕರಾರು ಮಾಡಿರುವುದರಿಂದ ಪ್ರತಿವಾದಿರವರು ಮನೆಯ ಒಳಗಡೆ ಇರುವ ಪ್ಲಾಸ್ಟರ ಹಾಗೂ ಶೌಚಾಲಯ ಕೆಲಸ ಮಾತ್ರ ನಿಂತಿದೆ ಎಂದರೆ ಸರಿಯಲ್ಲ. ನಾನು ದಾವೆಯನ್ನು ಸಲ್ಲಿಸಿದ 2-3 ವರ್ಷಗಳ ಹಿಂದೆ ಪ್ರತಿವಾದಿರವರು ದಾವಾ ಸ್ವತ್ತಿನಲ್ಲಿ ಅತಿಕ್ರಮಣ ಮಾಡಿರುತ್ತಾರೆ. ಸಾರ್ವಜನಿಕ ರಸ್ತೆಯ ಅಳತೆ ನನ್ನ ದಾವೆಯಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅಲ್ಲಿ ಸಾರ್ವಜನಿಕ ರಸ್ತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಮನೆಯ ಎದುರುಗಡೆ ಪೂರ್ವ ದಿಕ್ಕಿನಿಂದ ಪಶ್ಚಿಮ ದಿಕ್ಕಿಗೆ ಜನ ಓಡಾಡುತ್ತಾರೆ ಸರಿಯಲ್ಲ. ಪ್ರತಿವಾದಿರವರು ಕಟ್ಟಿರುವ ಶೌಚಾಲಯಕ್ಕೆ ಪೈಪಲೈನ ಕನೆಕ್ಷನ್ ಕೊಟ್ಟರೆ ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ಮನೆಯನ್ನು ಕಟ್ಟುತ್ತಿರುವಾಗ ಪ್ರತಿವಾದಿರವರು ತಕರಾರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಖರೀದಿಸಿದ ಮನೆಯನ್ನು ಹೊಸದಾಗಿ ಕಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ಕೆಳಗಡೆ ಇರುವ ಮನೆ ಹಂಗೆ ಇರುತ್ತದೆ ಹಾಗೂ 1ನೇ ಮಹಡಿಯಲ್ಲಿ ಕಟ್ಟಡ ಮಾಡಿರುತ್ತೇನೆ. ನಾನು ನಮ್ಮ ಮನೆಯಲ್ಲಿ ಜಾನುವಾರಗಳನ್ನು ಕತ್ತರಿಸಿರುವುದರಿಂದ ಅದರ ವಾಸನೆ ಬಂದಿರುವ ಬಗ್ಗೆ ಸಾರ್ವಜನಿಕರು ಹಾಗೂ ಪ್ರತಿವಾದಿರವರು ನನ್ನ ವಿರುದ್ದ ತಕರಾರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆದ್ದರಿಂದ ನಾನು ಪ್ರತಿವಾದಿರವರ ವಿರುದ್ದ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಅಡೆ-ತಡೆ ಮಾಡಿರುವುದರಿಂದ ಪ್ರತಿವಾದಿರವರು ಪೊಲೀಸರಿಗೆ ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿರವರು ಪೊಲೀಸ ಠಾಣೆಗೆ ಹೋಗಿದ್ದಾರೆ ಹಾಗೂ ನಾನು ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ. ಪೊಲೀಸರು ಯಾವುದೇ ಕ್ರಮವನ್ನು ಕೈಗೊಳ್ಳದೇ ಇರುವುದರಿಂದ ನಾನು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿರವರು ನನ್ನ ವಿರುದ್ದ ದಾವೆ ನಂ.ಓ.ಎಸ್. 11/2023

ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾನು ಯಾವುದೇ ರೀತಿಯ ಅಡೆ-ತಡೆ ಮಾಡಬಾರದು ಎಂದು ಆದೇಶ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ದಾವೆಯಲ್ಲಿ ಸಲ್ಲಿಸಿದ ಅರ್ಜಿಯನ್ನು ವಜಾ ಮಾಡಲಾಗಿದೇ ಹಾಗೂ ಮೇಲ್ಮನವಿಯಲ್ಲಿಯು ಕೂಡಾ 3 ಪೂಟ ಜಾಗವನ್ನು ಬಿಟ್ಟು ಕಟ್ಟಬೇಕು ಎಂದು ಆದೇಶ ಆಗಿರುತ್ತದೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾನು ಮೋಸ ಮಾಡಿ ತಡೆಯಾಜ್ಞೆ ಆದೇಶವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿರವರು ಸಲ್ಲಿಸಿದ ದಾವೆ ಚಾಲ್ತಿಯಲ್ಲಿರುತ್ತದೆ. ನನಗೆ ದಾದೆ ಸಲ್ಲಿಸಲು ಯಾವುದೇ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು
ಸೇಡಂ.